**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ</u>**

**ಓ.ಎಸ್. 153/2018**

**ಪಿ.ಡಬ್ಲ್ಯೂ.1 – ಡಿ.ರಾಮಯ್ಯ**

**ಪ್ರಮಾಣೀಕರಿಸಿದ ದಿನಾಂಕ: 28.02.2020**

**<u>ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದ : –</u>**

ನಾನು ಈ ದಾವೆಯ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿವೆ ಮತ್ತು ಅದರಲ್ಲಿರುವ ರುಜು ನನ್ನದೇ ಆಗಿದೆ.

ನಿ.ಪಿ.1 – ವಂಶವೃಕ್ಷ
ನಿ.ಪಿ.2 – ರಾಜಸ್ವ ನಿರೀಕ್ಷಕರು ತಯಾರಿಸಿರುವ ಮಹಜರ್
ನಿ.ಪಿ.3 – ರಾಜಸ್ವ ನಿರೀಕ್ಷಕರು ನೀಡಿರುವ ವರದಿ
ನಿ.ಪಿ.4 – ನಕ್ಷೆ
ನಿ.ಪಿ.5 – ತಹಶೀಲ್ದಾರರವರಿಂದ ಪಡೆದಿರುವ ರಿಜಿಸ್ಟರ್‌ನ ನಕಲು
ನಿ.ಪಿ.6 – ಮರಣ ಪ್ರಮಾಣ ಪತ್ರ
ನಿ.ಪಿ.7 ರಿಂದ 11 – ಪಹಣಿಗಳು
ನಿ.ಪಿ.12 – ಪೊಲೀಸರು ನೀಡಿರುವ ಸ್ವೀಕೃತಿ
ನಿ.ಪಿ.13 – ಸಾಗುವಳಿ ಚೀಟಿ
ನಿ.ಪಿ.14 – ದಿ:13.03.1946ರ ಸಾಗುವಳಿ ಚೀಟಿಯ ಕುರಿತ ಆದೇಶ
ನಿ.ಪಿ.15 ರಿಂದ 18 – ಕಂದಾಯ ರಸೀದಿಗಳು
ನಿ.ಪಿ.19 – ತಹಶೀಲ್ದಾರರಿಗೆ ನೀಡಿರುವ ಅರ್ಜಿ
ನಿ.ಪಿ.20 – ತಹಶೀಲ್ದಾರರು ನೀಡಿರುವ ಹಿಂಬರಹ
ನಿ.ಪಿ.21 – ದಿ:03.10.2016ರ ಒಪ್ಪಿಗೆ ಪತ್ರ

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಗುವಳಿ ಚೀಟಿಯನ್ನು ಗುರ್ತಿಸಲು ಅದರಲ್ಲಿ ಸಂಬಂಧಿಸಿದ ಇಲಾಖೆಯ ಮೊಹರು ಇಲ್ಲ ಎಂದು ಮತ್ತು ಸರ್ಕಾರ ವಹಿಸಿರುವ ಆದೇಶದ ಸಂಬಂಧ ಪಟ್ಟ ಇಲಾಖೆಯ ಮೊಹರು ಇಲ್ಲ ಎಂದು, ತಕರಾರು ಸಲ್ಲಿಸಿದ್ದು, ಸದರಿ ತಕರಾರಿಗೆ ಒಳಪಟ್ಟು ಸದರಿ ದಾಖಲೆಗಳನ್ನು ನಿ.ಪಿ.13 ಮತ್ತು 14 ಎಂದು ಗುರ್ತಿಸಲಾಯಿತು.

ದಿ:03.10.2016ರ ಒಪ್ಪಿಗೆ ಪತ್ರವನ್ನು ನೋಂದಣಿ ಮಾಡಿಸಿಲ್ಲ ಎಂದು ತಕರಾರು ಸಲ್ಲಿಸಿದ್ದು, ಸದರಿ ತಕರಾರಿಗೆ ಒಳಪಟ್ಟು ನಿ.ಪಿ.21 ಎಂದು ಗುರ್ತಿಸಲಾಯಿತು. ವಾದಿ ಪರ ವಕೀರಲು ಪ್ರತಿವಾದಿಗಳು ಈ ದಾವೆಗೆ ಯಾವುದೆ ತಕರಾರು ಸಲ್ಲಿಸಿಲ್ಲ, ಅವರು ನೀಡಿರುವ

ದಾಖಲೆಗಳು ಬಹಳ ಹಿಂದಿನ ಮುದ್ರಿತ ದಾಖಲೆಗಳಾಗಿದ್ದು, ಅದರಲ್ಲಿ ಮೊಹರು ಅಗತ್ಯ ಇರುವುದಿಲ್ಲ ಮತ್ತು ಸದರಿ ಮೊಹರಿನ ಜಾಗದಲ್ಲಿ ಅವರ ಪದಗ್ರಹಣವನ್ನು ಮುದ್ರಿಸಿರುತ್ತಾರೆ ಎಂದು ಹೇಳಿರುತ್ತಾರೆ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**